ಬಂದು ಸೇರಿದ್ದರು. ಹೀಗಾಗಿ ಯಾರನ್ನೂ ಕಾಯುವ ಅಗತ್ಯವಿರಲಿಲ್ಲ.

ಆದರೂ ಕೂಡ ರಾತ್ರಿಯ ಪ್ರಾರ್ಥನೆಯಾದ ನಂತರ ಅವಳ ದಫನ ಕಾರ್ಯ ಎಂದು ನಿರ್ಧರಿಸಲಾಗಿತ್ತು. ಹೀಗಾಗಿ ಸಂಜೆಯ ಮಗ್ರಿಬ್ ನಮಾಜಿನ ನಂತರ ಹೆಣವನ್ನು ಮಸೀದಿಗೆ ಒಯ್ಯುವುದು ಎಂದು ಈ ಮೊದಲೇ ತೀರ್ಮಾನವಾಗಿತ್ತು. ಸಂಜೆಯ ಹೊತ್ತಿಗೆ ಎಲ್ಲರ ಮನೆಗಳಲ್ಲಿ ದೀಪ ಹೊತ್ತಿತು. ಅವಳ ಮನದಲ್ಲಿ ಅಂಧಕಾರ ಕವಿದಿತ್ತು. ಒಳಮನದ ಕೋಲಾಹಲಕ್ಕೆ ಉತ್ತರಿಸುವವರು ಯಾರೂ ಇರಲಿಲ್ಲ. 'ನಾನೆಲ್ಲಿ ಎಡವಿದೆ? ನನ್ನಿಂದ ಎಲ್ಲಿ ತಪ್ಪಾಯಿತು? ಯಾಕೆ ಹೀಗಾಯಿತು? ಮೆಹೆಕ್ ನನ್ನ ಸರ್ವನಾಶ ಮಾಡಲು ನಿನಗೆ ಯಾರು ಅಧಿಕಾರ ಕೊಟ್ಟರು? ನಿನ್ನ ಅಕ್ಕನ ಮದುವೆಯ ಕಾರ್ಯವನ್ನು ನಾನು ಹೇಗೆ ಮಾಡಲಿ? ಅವಳನ್ನು ಮದುವೆಯಾಗುವವರ್‍ಯಾರು? ಇದೆಂಥಾ ಮೋಸ ಮಾಡಿದೆ ಮೆಹೆಕ್? ನಾನು ನಿನಗೆ ಏನು ಕಡಿಮೆ ಮಾಡಿದ್ದೆ?' ಈ ಎಲ್ಲಾ ಪ್ರಶ್ನೆಗಳು ಅವಳ ಮನಸ್ಸಿನಲ್ಲಿ ಮೂಡಿ ಮರೆಯಾಗುತ್ತಾ ಕೊನೆಗೆ ಒಂದು ಮಾತು ಅವಳ ಮನದಲ್ಲಿ ಸ್ಥಿರವಾಗಿ ಮಿನುಗ ತೊಡಗಿತು. ಯಾಕೆ ಹೀಗೆ ನನಗೆ ಮೋಸ ಮಾಡಿದೆ ಮೆಹೆಕ್?

ತಲೆಯಲ್ಲಿ ಚಕ್ರ ಸುತ್ತಿದಂತೆ, ಈ ಪ್ರಶ್ನೆ ವಿವಿಧ ರೂಪಗಳಲ್ಲಿ ಸುತ್ತ ತೊಡಗಿತು. ಆ ಪ್ರಶ್ನೆ ಅವಳಲ್ಲೇ ಕ್ರೋಧ, ದ್ವೇಷ, ತಿರಸ್ಕಾರ, ಇವತ್ತು ಅಸಹನೆಯನ್ನು ಹುಟ್ಟು ಹಾಕಿತು. ಏನು ಮಾಡಿಬಿಟ್ಟೆ ಮೆಹೆಕ್; ಆತ್ಮಹತ್ಯೆಯಂತಹ ಪಾಪದ ಕೆಲಸವನ್ನು ಮಾಡಿದೆಯಲ್ಲಾ ಮಗಳೇ. ನಿನ್ನನ್ನು ನಾನು ಹೇಗೆ ನನ್ನ ಸೆರಗಿನಲ್ಲಿ ಮರೆ ಮಾಡಿಕೊಳ್ಳಲಿ? ದುನಿಯಾದ ಜನರನ್ನು ಅತ್ತ ಸರಿಸೋಣ. ಅವರ ಯಾವ ಪ್ರಶ್ನೆಗೂ ನೀನಾಗಲೀ ಅಥವಾ ನಾನಾಗಲೀ ಉತ್ತರಿಸಬೇಕಾದ ಜರೂರತ್ತು ಇಲ್ಲ. ಆದರೆ ಅಲ್ಲಾಹನಿಗೆ ನಾನು ಏನೆಂದು ಉತ್ತರಿಸಲಿ? ಕಿಯಾಮತ್‌ನ ದಿನ ಕೂಡ ನಿನಗೆ ಬಿಡುಗಡೆ ಇಲ್ಲವಲ್ಲ ಮಗು... ನಿನ್ನ ಆಯುಷ್ಯ ಎಷ್ಟಿತ್ತು ಅಥವಾ ಇಷ್ಟೇ ಇತ್ತು. ಇಲ್ಲದಿದ್ದರೆ ನೀನು ಯಾಕೆ ಸಾಯುತ್ತಿದ್ದೆ? ದೇವರೆ, ಇದೆಂತಹ ಸಂಕಟ? ಅಲ್ಲಾಹ್, ನಾನು ಯಾವ ಪಾಪ ಮಾಡಿದ್ದೆ? ನನ್ನ ಪಾಪಗಳಿಗೆ ನನ್ನ ಮಗು ಹೇಗೆ ಹೊಣೆಯಾಗುತ್ತದೆ?

ಬೇಗ ಬೇಗ... ಇಷಾ ನಮಾಜಿಗೆ ತಡವಾಗುತ್ತದೆ, ದೀದಾರ್ ನೋಡುವವರೆಲ್ಲ ಸಾಲಾಗಿ ಬನ್ನಿ ಎಂಬ ಕರೆಗೆ ಎಲ್ಲರೂ ಮನೆಯಿಂದ ಹೊರಗಡೆ ಶಾಮಿಯಾನದ ಅಡಿಯಲ್ಲಿ ಸೇರಿದರು. ಅಲ್ಲಿ ಒಂದು ಟೇಬಲ್ಲಿನ ಮೇಲೆ ಇಟ್ಟಿದ್ದ ಮರದ ಜನಾಜದಲ್ಲಿ ಅವಳು ಶಾಂತವಾಗಿ ಮಲಗಿದ್ದಳು. ಬಿಸಿ ನೀರಿನಲ್ಲಿ ಅವಳಿಗೆ ಸ್ನಾನ ಮಾಡಿಸಿದ್ದರಿಂದ ಆಕೆಯ ಮುಖ ಕಳೆಗಟ್ಟಿತ್ತು. ಆಶ್ಚರ್ಯಕರವಾಗಿ ಅವಳ ನಾಲಗೆ ಹೊರಬಿದ್ದಿರಲಿಲ್ಲ. ತುಟಿಗಳನ್ನು ಮುಚ್ಚಿದ ಅವಳ ಮುಖ ಅತ್ಯಂತ ಸುಂದರವಾಗಿ ಕಂಡು ಬರುತ್ತಿತ್ತು. ಸುರ್ಮಾದಿಂದ ಹುಬ್ಬುಗಳನ್ನು ತೀಡಿದ್ದರಿಂದ ದಟ್ಟವಾಗಿ ಮತ್ತು ಕಪ್ಪಗೆ ಕಂಡುಬರುತ್ತಿದ್ದವು.

ಟೇಬಲ್ಲಿನ ಬಳಿ ಒಂದು ಚೇರ್ ಅನ್ನು ಇಟ್ಟಿದ್ದರು. ಆಕೆಯ ಇಬ್ಬರು ವಾರಗಿತ್ತಿಯರು ಮತ್ತು ಫೈಜಾ ಅವಳಿಗೆ ಆಸರೆಯನ್ನು ನೀಡಿ ಜನಾಜಾ ಬಳಿ ಕರೆತಂದರು. ನಡೆಯಲು ಅವಳಿಗೆ ಸಾಧ್ಯವಿರಲಿಲ್ಲ. ಹೀಗಾಗಿ ಅವಳ ತಮ್ಮ ಬಂದು ಆ ಮಹಿಳೆಯರಿಂದ ಅವಳನ್ನು ಮುಕ್ತಗೊಳಿಸಿ ಅವಳ ಸೊಂಟಕ್ಕೆ ಒಂದು ಕೈಯ ಆಸರೆಯನ್ನು ನೀಡಿ ಅವಳ ಪೂರ್ಣ ಭಾರವನ್ನು ತನ್ನ ಮೇಲೆ ಇರಿಸಿಕೊಂಡು ಮಗುವನ್ನು ಎತ್ತಿಕೊಂಡಂತೆ ಅವಳನ್ನು ಕರೆತಂದು ಅಲ್ಲಿದ್ದ ಕುರ್ಚಿಯ ಮೇಲೆ ಕೂರಿಸಿದ. ಅವಳ ಪಕ್ಕಕ್ಕೆ ಬಂದ ಅವಳ ವಾರಗಿತ್ತಿ, "ಭಾಭಿ ದೃಷ್ಟಿ ಇಟ್ಟು ನೋಡಿ ಅವಳನ್ನು. ಇನ್ನು ಖಿಯಾಮತ್‌ನಲ್ಲಿ ನಿಮ್ಮ ಭೇಟಿಯಾಗುವುದು. ಅಲ್ಲಿಯವರೆಗೆ ಅವಳ ನೆನಪು ಮತ್ತು ಚಹರೆ ನಿಮ್ಮ ಕಣ್ಣು ಮತ್ತು ಮನಸ್ಸಿನಲ್ಲಿ ಆಳವಾಗಿ ಇಳಿಯಬೇಕು" ಎಂದು ಅವಳಿಗೆ ಮಾತ್ರ ಕೇಳಿಸುವಂತೆ ಪಿಸು ನುಡಿದಳು.

ಅವಳ ಪಕ್ಕದಲ್ಲಿ ಇದ್ದ ಇನ್ನೊಬ್ಬ ವಾರಗಿತ್ತಿ ಅವಳ ಎರಡು ಹಸ್ತಗಳನ್ನು ಪ್ರಾರ್ಥನೆಗೆ ಒಡ್ಡಿದಂತೆ ಹಿಡಿದು, "ಓ ಅಲ್ಲಾಹನೆ ನನ್ನ ಮಗಳ ಮುಂದಿನ ಪಯಣವನ್ನು ಸುಗಮಗೊಳಿಸು.